

# ಬೀಜ ಪ್ರಸರಕ ಕುಟುರ

**ಕಾಡಿನಲ್ಲಿ ಬೀಜ ಪ್ರಸರಣ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಕುಟುರ ಹಕ್ಕಿಯ ಮೈ ಬಣ್ಣ ಚಿತ್ತಾಕರ್ಷಕ. ಇದರ ಕೂಗು ಕೂಡ ಮೋಹಕ.**

**■ ಶಶಿಧರಸ್ವಾಮಿ ಆರ್. ಹಿರೇಮಠ**

ಕವಿ ಕುವೆಂಪು ಅವರು ಕುಟ್ರ ಪಕ್ಷಿಯ ಕೂಗು ಕೇಳಿದರೆ ಒಂದು ನಿಮಿಷ ಧ್ಯಾನಮಗ್ನರಾಗಿ ನಿಲ್ಲುತ್ತಿದ್ದರಂತೆ. ಆ ಬಗ್ಗೆ ಅವರ ಪುತ್ರ ಪೂರ್ಣಚಂದ್ರ ತೇಜಸ್ವಿ ಹೀಗೆ ದಾಖಲಿಸಿದ್ದಾರೆ:

‘‘ಕುಟುರದ ಕೂಗು ಕೇಳಿದರೆ ಸಾಕು ನಮ್ಮ ತಂದೆಯವರು (ಕುವೆಂಪುರವರು) ಯಾವುದೇ ಕೆಲಸ ಮಾಡುತ್ತಿರಲಿ, ಅದನ್ನು ನಿಲ್ಲಿಸಿ ಒಂದು ನಿಮಿಷ ಧ್ಯಾನಮಗ್ನರಂತೆ ಸುಮ್ಮನೆ ನಿಲ್ಲುತ್ತಿದ್ದರು. ನನಗೆ ಇವರು ಹಕ್ಕಿಯನ್ನು ಸಹ ನೋಡದೆ ಕೇವಲ ಕೂಗಿಗೆ ಏಕೆ ಹೀಗೆ ಸಂತೋಷಪಡುತ್ತಾರೆ? ಎಂದು ಆಶ್ಚರ್ಯವಾಗುತ್ತಿತ್ತು. ಹೀಗೆ ಒಮ್ಮೆ ಅವರನ್ನು ಕೇಳಿದಾಗ, ಕುಟುರದ ಕೂಗು ಹೇಗೆ ತಮಗೆ ಚಿಕ್ಕಂದಿನ ಮಲೆನಾಡಿನ ಅನುಭವಗಳ ಅವಿಭಾಜ್ಯ ಅಂಗವಾಗಿದೆ ಎಂಬುದನ್ನು ವಿವರಿಸಿದರು. ‘ಕುಟುರನ ಕೂಗು ಕೇಳಿದರೆ ಸಾಕು, ನನ್ನ ಇಡೀ ಚೇತನ ತಟಕ್ಕನೆ ಮಲೆನಾಡಿಗೆ ಸ್ಥಳಾಂತರ ಹೊಂದುತ್ತದೆ. ವಿಸ್ತಾರ ಗದ್ದೆ ಕೋಗು, ಸುತ್ತ ಕವಿದಿರುವ ದಟ್ಟ ಕಾಡು, ಮಾಲೆ ಮಾಲೆಯಾಗಿ ತಲೆಯೆತ್ತಿ ನಿಂತಿರುವ ಪರ್ವತ ಶ್ರೇಣಿಗಳು ಎಲ್ಲ ಬರಿಯ ಅದರ ಒಂದು ಕೂಗಿನಿಂದ ನನ್ನೆದುರು ಮೈವೆತ್ತು ನಿಲ್ಲುತ್ತವೆ. ಕುಟುರನ ಕೂಗು ನಿಮ್ಮೆಲ್ಲರಿಗೂ ಒಂದು ಹಕ್ಕಿಯ ಕೂಗಾದರೆ ನನಗೆ ಅದೊಂದು ಮಂತ್ರ’ ಎಂದಿದ್ದರು’’.

ಹೆಬ್ರಿಯ ತೋಟವೊಂದಕ್ಕೆ ಬಾಯಾರಿಕೆ ನೀಗಿಸಿಕೊಳ್ಳಲು ಬಂದಿದ್ದ ಹಕ್ಕಿಗಳ ಸಂಕುಲದಲ್ಲಿ ಕುಟುರ ಹಕ್ಕಿಗಳೂ ಇದ್ದದ್ದು ಕಂಡು ಈ ಮಾತು ನೆನಪಾಯಿತು. ಕುಟುರಗಳು ತಮ್ಮ ದೇಹಕ್ಕೆ ಅಗತ್ಯವಿರುವ ನೀರನ್ನು ಹಣ್ಣಿನಿಂದ ಪಡೆಯುತ್ತವೆ. ಮರದ ಪೊಟರೆಯಲ್ಲಿ ನೀರು ಲಭ್ಯವಿದ್ದಾಗ, ಅವು ಕೆಲವೊಮ್ಮೆ ಕುಡಿಯುತ್ತವೆ ಮತ್ತು ಆ ನೀರಿನಲ್ಲಿ ಜಳಕ ಮಾಡಿ ಪುಳಕಗೊಳ್ಳುತ್ತವೆ.

ಕುಟುರ ಹಕ್ಕಿಯನ್ನು ಕುಟ್ರುಪಕ್ಷಿ, ಗುಟ್ರ ಕುಟ್ರ ಶೆಟ್ಟಿ ಸೇರಿದಂತೆ ನಾನಾ ಹೆಸರುಗಳಿಂದ ಕರೆಯುತ್ತಾರೆ. ಸಂಸ್ಕೃತದಲ್ಲಿ ‘ಪಿಪ್ಪಲಿ’ ಎನ್ನುತ್ತಾರೆ. ‘ಮಂಡೆ ಉಕ್ರೆ’ ಎಂದು ತುಳುವಿನಲ್ಲಿ ಕರೆದರೆ, ‘ಕುಟ್ರು ಪಕ್ಷಿ’ ಎಂದು ಕೊಡವರು ಕರೆಯುತ್ತಾರೆ. ಇಂಗ್ಲಿಷಿನಲ್ಲಿ ವೈಟ್ ಚೀಕ್ಡ್ ಬಾರ್ಬೆಟ್ ಅಥವಾ ಸ್ಮಾಲ್ ಗ್ರೀನ್ ಬಾರ್ಬೆಟ್ ಎನ್ನುತ್ತಾರೆ. ಈ ಹಕ್ಕಿಯನ್ನು ಸೈಲೋಪೊಗನ್ ವಿರಿಡಿಸ್ (Psilopogon viridis) ಎಂದು ಪಕ್ಷಿಶಾಸ್ತ್ರೀಯವಾಗಿ ಹೆಸರಿಸಿ ಪಿಸಿಫಾರ್ಮಿಸ್ (Piciformes) ಗಣದ ಮೆಗಾಲೈಮಿಡೆ (Megalaimidae) ಕುಟುಂಬಕ್ಕೆ ಸೇರಿಸಲಾಗಿದೆ.

ಇವು ಜೋಡಿಯಾಗಿ ಹೆಚ್ಚು ಕಾಣಿಸಿಕೊಳ್ಳುತ್ತವೆ. ಮಾಸಲು ಹಸಿರು ಬಣ್ಣದ ಹಕ್ಕಿ. ತಲೆ, ಕತ್ತು ತಿಳಿ ಕಂದು ಬಣ್ಣದಾಗಿದ್ದು ಎದೆಯ ಮೇಲೆ ಬಿಳಿ ಗೆರೆಗಳಿವೆ. ಕೆನ್ನೆ ಮತ್ತು ಗದ್ದ ಬಿಳಿಬಣ್ಣದ್ದು, ಬಲವಾದ ಕೇಸರಿ ಕೊಕ್ಕಿನ ತಳ ಹಾಗೂ ಮೇಲ್ಭಾಗದಲ್ಲಿ ಮೀಸೆ ಹೊಂದಿದೆ. ಕೊಕ್ಕಿನ ಬುಡದಲ್ಲಿರುವ ಕೂದಲಿನಲ್ಲಿ ಪರಾಗಗಳು ಅಂಟಿಕೊಂಡು, ಪರಾಗಸ್ಪರ್ಶದಲ್ಲಿ ಸಹಕಾರಿಯಾಗಿವೆ. ಮೋಟಾದ ಬಾಲ ಹೊಂದಿದೆ. ಕಾಲುಗಳು ಪಾಚಿ ಹಸಿರು. ಗಂಡು–ಹೆಣ್ಣು ಹಕ್ಕಿಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ.



ಛಂದೋಬದ್ಧವಾಗಿ ಕ್ಕುಟ್ರು... ಕ್ಕುಟ್ರು... ಕ್ಕುಟ್ರು... ಎಂದು ಒಂದೇ ಸಮ ಕೂಗುತ್ತದೆ. ನಿತ್ಯಹರಿದ್ವರ್ಣ, ಅರೆ ನಿತ್ಯಹರಿದ್ವರ್ಣ, ತೇವ ಪರ್ಣಪಾತಿ ಕಾಡು, ತೋಟಗಳ ಮರಗಳು ಇವುಗಳ ಆವಾಸ ತಾಣ. ಡಿಸೆಂಬರ್‌ನಿಂದ ಜೂನ್‌ವರೆಗೆ ಒಣಗಿದ ಮೃದು ಮರಗಳಲ್ಲಿ ಪೊಟರೆ ಕೊರೆದು ಗೂಡು ಮಾಡಿ ಎರಡರಿಂದ ಮೂರು ಬಿಳಿ ಬಣ್ಣದ ಮೊಟ್ಟೆಗಳನ್ನಿಟ್ಟು ಮರಿ ಮಾಡಿಸುತ್ತದೆ.

ಕೆಲವು ಸಲ ಗೆದ್ದಲು, ಇತರೆ ಕೀಟಗಳನ್ನು ಆಹಾರವಾಗಿ ಕಬಳಿಸಿದರೂ, ಹಣ್ಣುಗಳನ್ನು ಅಧಿಕವಾಗಿ ಭಕ್ಷಿಸುವ ಇವುಗಳದ್ದು ಬೀಜ ಪ್ರಸರಣ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ. ಇವು ಅಂತರ್ವಾಹಕ ಬೀಜ ಪ್ರಸರಕಗಳಾಗಿದ್ದು, ಹಣ್ಣುಗಳನ್ನು ತಿಂದು, ಅದರೊಂದಿಗಿನ ಬೀಜಗಳೂ ಪಕ್ಷಿಯ ಹೊಟ್ಟೆ ಸೇರಿ, ಹಿಕ್ಕೆಯೊಂದಿಗೆ ಹೊರಬರುತ್ತದೆ. ಹೀಗೆ ಕವಚ ಕಳೆದು ಹೊರಬಂದ ಬೀಜ ಸುಲಭವಾಗಿ ಮೊಳಕೆಯೊಡೆಯುತ್ತದೆ. ಕಾಡನ್ನು ಅಲೆದಾಡುತ್ತಾ ಹಿಕ್ಕೆ ಹಾಕುತ್ತಾ ಕಾಡಿನ ಮರಗಳನ್ನು ಬೆಳೆಸುವ ಕುಟುರ, ವಿಶೇಷ ಹಕ್ಕಿ ಎನಿಸಿದೆ.

ಪ್ರತಿಕ್ರಿಯಿಸಿ: feedback@sudha.co.in